ಇಂದು **ದಿಃ25-09-2025 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದ ಸಾಕ್ಷಿಯನ್ನು ಪುನಃ ಕರೆಯಿ**ಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಪಿ.ಜೆ ವಕೀಲರಿಂದ ಎದುರುದಾರರ ಪರ ಃ ಮಧ್ಯಂತರ ಅರ್ಜಿ ನಂ.1 ರ ವಿಚಾರಣೆ ಕುರಿತಂತೆ.**

ಈ ಅಪೀಲನ್ನು ನನ್ನ ತಾಯಿ ಸಲ್ಲಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಆಗ ಎಫ್.ಡಿ.ಪಿ ಬಗ್ಗೆ ಗೊತ್ತಾಗಲಿಲ್ಲ ಎಂದು ಹೇಳುತ್ತಾರೆ. FDP No.13/2018 ರಲ್ಲಿ ನಾನು ಹಾಜರಾಗುತ್ತಿದ್ದೇನೆ ಎಂದರೆ ಸರಿ. ಸಾಕ್ಷಿ ಮೊದಲು ನನ್ನ ತಾಯಿ ಆ ಪ್ರಕರಣ ನೋಡಿಕೊಳ್ಳುತ್ತಿದ್ದರು, ಈಗ ನಾನು ನೋಡಿಕೊಳ್ಳುತ್ತಿದ್ದೇನೆ ಎಂದು ಹೇಳುತ್ತಾರೆ. 2 ನೇ ಎದುರುದಾರ ಹನುಮಂತಪ್ಪ ತೀರಿಕೊಂಡಿದ್ದಾರೆ, ಈ ವಿಷಯವನ್ನು ನನ್ನ ವಕೀಲರಿಗೆ ತಿಳಿಸಿರುತ್ತೇನೆ. 2 ನೇ ಎದುರುದಾರರಿಗೆ ವಾರಸುದಾರರು ಇದ್ದಾರೆ. ನಾವು ಸಹ FDP ಯಲ್ಲಿ ಪಾರ್ಟಿ ಇದ್ದೇವೆ ಎಂದರೆ ಸರಿ. FDP No.13/2018 ನ್ನು ದಾಖಲು ಮಾಡುವ ಸಮಯದಲ್ಲಿ ನನಗೆ ಪ್ರಾಥಮಿಕ ಡಿಕ್ರಿಯ ಬಗ್ಗೆ ಮಾಹಿತಿ ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿರಲಿಲ್ಲ, ನಾನು ಕೆಲಸಕ್ಕೆ ಹೋಗುತ್ತಿದ್ದೆನು ಎಂದು ಹೇಳುತ್ತಾರೆ. ನಾನು 2 ನೇ ಪಿ.ಯು.ಸಿ ಕಲಿತ್ತಿದ್ದೇನೆ. ಪ್ರಾಥಮಿಕ ಡಿಕ್ರಿಯ ಬಗ್ಗೆ ನನಗೆ ಮಾಹಿತಿ ಸುಮಾರು 2 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. 2 ನೇ ಎದುರುದಾರ ಯಾವಾಗ ತೀರಿಕೊಂಡನು ಎಂದು ದಿನಾಂಕ ಗೊತ್ತಿಲ್ಲ. ಸಾಕ್ಷಿ 2 ವಾರದ ಹಿಂದೆ ತೀರಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಈ ಅಪೀಲುನಲ್ಲಿ ಮಧ್ಯಂತರ ಅರ್ಜಿ ನಂಬರ್ 1 ರ ಕುರಿತು ಬಂದು ನನ್ನ ತಾಯಿಗೆ ಸಾಕ್ಷಿ ಹೇಳಲು ತೊಂದರೆ ಇಲ್ಲ.

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ಸಲ್ಲಿಸಿದ ನಂತರ ನಿ.ಪಿ-2 ನ್ನು ಸೃಷ್ಠಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರ ಸಲ್ಲಿಸಿದ ನಂತರ ಮುಂದಿನ ದಿನಾಂಕದ ಮುಖ್ಯವಿಚಾರಣೆಯಲ್ಲಿ

ಹಾಜರುಪಡಿಸಿದ್ದೇನೆ ಎಂದರೆ ಸರಿ. ನಿ.ಪಿ-2 ನ್ನು ಹಳೆಯ ದಿನಾಂಕ ಹಾಕಿಸಿ ಬರೆಯಿಸಿ ತಂದಿದ್ದೇನೆ ಎಂದರೆ ಸರಿಯಲ್ಲ. ನಾವು ಎಲ್ಲಾ ಒಟ್ಟು ಕುಟುಂಬದ ಆಸ್ತಿಗಳಲ್ಲಿ ಪಾಲು ಆಗಬೇಕು ಎಂದು ದಾವೆಯಲ್ಲಿ ಪ್ರತಿಕ್ಲೇಮು ಕೇಳಿದ್ದೇವು. ಆ ದಾವೆಯಲ್ಲಿ ನನ್ನ ತಾಯಿಗೂ ಒಂದು ಭಾಗ ಬಂದಿದೆ ಎಂದರೆ ಸರಿ. ಸಾಕ್ಷಿ ನನ್ನ ತಂದೆಯ ಹೆಸರಿಗೆ ಇದ್ದ ಆಸ್ತಿಯಲ್ಲಿ ಮಾತ್ರ ಭಾಗ ಎಲ್ಲರಿಗೂ ಕೊಟ್ಟಿದ್ದಾರೆ. ಉಳಿದ ಆಸ್ತಿಗಳಲ್ಲಿ ಹಿಸ್ಸೆ ಆಗಿಲ್ಲ ಎಂದು ಹೇಳುತ್ತಾರೆ. ನನ್ನ ತಾಯಿ, ಚಿಕ್ಕಪ್ಪಂದಿರು ಈ ಪ್ರತಿಕ್ಲೇಮುನಲ್ಲಿ ಪಿತ್ರಾರ್ಜಿತ ಆಸ್ತಿಯಲ್ಲಿ ಹಿಸ್ಸೆ ಬೇಕು ಮತ್ತು ನಮಗೂ ಸಹ ಸಮಾನ ಹಿಸ್ಸೆಬೇಕು ಎಂದು ಕೇಳಿದ್ದರು ಎಂದರೆ ಸರಿ. ನಮ್ಮ ಪ್ರತಿಕ್ಲೇಮನ್ನು ವಜಾ ಮಾಡಿದರು ಎಂದರೆ ಸರಿ. FDP No.13/2018 ದಾಖಲು ಮಾಡುವ ಸಮಯದಲ್ಲಿ ನಮಗೆ ನಮ್ಮ ಪ್ರತಿಕ್ಲೇಮ್ ವಜಾ ಆದ ಬಗ್ಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ, ಸಂಚಾರಿ ನ್ಯಾಯಾಲಯ,
ಹೊನ್ನಾಳಿ.